ದಿನಾಂಕ: 25.06.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆ: ಶ್ರೀ. ಎನ್‌ಎಮ್‌ಕೆ ವಕೀಲರಿಂದ ಪ್ರತಿವಾದಿ ಪರವಾಗಿ:

ನನ್ನ ಮುಖ್ಯ ವಿಚಾರಣೆಯಾಗಿ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಬರೆಯಲಾಗಿರುವ ಅಂಶಗಳು ನನಗೆ ತಿಳಿದಿದ್ದು ಸತ್ಯಾಂಶಗಳಿಂದ ಕೂಡಿರುತ್ತದೆ.

ಪ್ರತಿವಾದಿಯು ನನ್ನ ಹೆಂಡತಿ ಆಗಿದ್ದು ಈ ಪ್ರಕರಣದಲ್ಲಿ ಹಾಜರಾಗಿ ವಿಚಾರಣೆ ನಡೆಸಲು ಬರೆದುಕೊಟ್ಟಿರುವ ಸಾಮಾನ್ಯ ಅಧಿಕಾರ ಪತ್ರವನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಡಿ:11 ಎಂದು ಗುರುತಿಸಲಾಯಿತು. ಈಗಾಗಲೇ ಹಾಜರುಪಡಿಸಿ ನಿಡಿ:1 ರಿಂದ 10ರಂತೆ ನಿಶಾನೆಯಾಗಿ ಗುರುತಿಸಿರುವ ದಾಖಲೆಗಳನ್ನು ನಾನು ಈಗ ನೋಡಿ ಗುರುತಿಸಿರುತ್ತೇನೆ.

ಪಾಟೀಸವಾಲು: ಶ್ರೀ.ಕೆಎಮ್ ವಕೀಲರಿಂದ ವಾದಿ ಪರವಾಗಿ.

ವಾದಿಯು ನಾವು ವಾಸವಾಗಿರುವಂತಹ ಮನೆಯ ಮಾಲೀಕರು ಆಗಿರುತ್ತಾರೆ ಎಂದರೆ ಸರಿ. ವಾದಿಗೆ ಸೇರಿದಂತಹ ಕಟ್ಟಡದ ಒಂದನೇ ಮಹಡಿಯ ಮನೆಯಲ್ಲಿ ನಾವು ಬಾಡಿಗೆದಾರರಾಗಿ ವಾಸವಾಗಿರುತ್ತೇವೆ ಎಂದರೆ ಸರಿ. ನಾವು ದಿ:11.02.2013ರಂದು ದಾವಾ ಶೆಡ್ಯೂಲ್ ಸ್ವತ್ತಿನ ಮನೆಗೆ ಬಾಡಿಗೆಗೆ ಬಂದಿರುತ್ತೇವೆ ಎಂದರೆ ಸರಿ. ನಾವು ಬಾಡಿಗೆಗೆ ಬಂದಾಗ ಆ ಮನೆಗೆ ತಿಂಗಳಿಗೆ ರೂ.4,000-00 ಬಾಡಿಗೆ ನಿಗದಿಪಡಿಸಲಾಗಿತ್ತು ಎಂದರೆ ಸರಿ. ಆ ನಂತರ ಪ್ರತಿ ವರ್ಷ ಶೇ.10ರಷ್ಟು ಬಾಡಿಗೆ ಹೆಚ್ಚಿಸುವಂತೆ ಬಾಡಿಗೆ ಕರಾರುಪತ್ರದಲ್ಲಿ ಮಾತುಕತೆ ಆಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಡಿಸೆಂಬರ್-2016 ರ ತನಕ ನಾವು ಪ್ರತಿ ತಿಂಗಳು ರೂ.4,000-00 ಗಳಂತೆ ಬಾಡಿಗೆ ಹಣವನ್ನು ಪಾವತಿ ಮಾಡಿರುತ್ತೇವೆ ಎಂದರೆ ಸರಿ. ಜನವರಿ-2017ರಿಂದ ಇವತ್ತಿನ ತನಕ ನಾವು ಬಾಡಿಗೆಯನ್ನು ಕೊಡುತ್ತಿಲ್ಲ ಎಂದರೆ ಸರಿ. ಸಾಕ್ಷಿ ಸ್ವತಃ 2013ಕ್ಕಿಂತ ಹಿಂದೆ ಬಾಕಿ ಇದ್ದಂತಹ ನೀರಿನ ಬಿಲ್ಲಿನ ಹಣವನ್ನು ಪಾವತಿ ಮಾಡಿದ್ದು ಅದನ್ನು ಬಾಡಿಗೆಗೆ ಸರಿಪಡಿಸಿಕೊಳ್ಳುವಂತೆ ಹೇಳಿದ್ದರಿಂದ ಬಾಡಿಗೆ ಹಣವನ್ನು ಕೊಟ್ಟಿರುವುದಿದಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿ ಸ್ವತಃ ಈ ಪ್ರಕರಣ ದಾಖಲು ಮಾಡುವ ಸಮಯದಲ್ಲಿ ನಾವು ಮೂರು ತಿಂಗಳಿಗೆ ಒಂದು ಸಾರಿ ಬಾಡಿಗೆ ಹಣವನ್ನು ಬ್ಯಾಂಕಿನ ಮುಖಾಂತರ

ಮತ್ತು ವಾದಿಯ ಪ್ರತಿನಿದಿಯ ಮುಖಾಂತರ ಪಾವತಿ ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ. ನಾವು ದಾವಾಶೆಡ್ಯೂಲ್ ಮನೆಗೆ ಬಾಡಿಗೆಗೆ ಬಂದಾಗ ಯಾವುದೇ ನೀರಿನ ಶುಲ್ಕ ಮತ್ತು ವಿದ್ಯುಚ್ಛಕ್ತಿ ಬಿಲ್ಲು ಬಾಕಿ ಇದ್ದಿರಲಿಲ್ಲ ಎಂದರೆ ಸರಿಯಲ್ಲ. 2017ರ ನಂತರ ನಾವು ನೀರಿನ ಶುಲ್ಕವನ್ನು ಪಾವತಿ ಮಾಡದೇ ಇದ್ದುದ್ದರಿಂದ ಬಿಡಬ್ಲೂಎಸ್‌ಎಸ್‌ಬಿರವರು ನೀರಿನ ಮೀಟರ್‌ನ್ನು ಕಿತ್ತುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ನೀರಿನ ಸಂಪರ್ಕವನ್ನು ಯಾವ ಕಾರಣಕ್ಕಾಗಿ ಕಡಿತಗೊಳಿಸಿರುತ್ತಾರೆ ಎಂದರೆ ವಾದಿಯ ಪ್ರತಿನಿದಿಯು ಹೋಗಿ ನಮಗೆ ತೊಂದರೆ ಕೊಡುವ ಉದ್ದೇಶದಿಂದ ನೀರಿನ ಸಂಪರ್ಕವನ್ನು ಕಡಿತಗೊಳಿಸಿರುತ್ತಾರೆ. ನೀರಿನ ಶುಲ್ಕವನ್ನು ಪಾವತಿ ಮಾಡದೇ ಇರುವುದರಿಂದ ನೀರಿನ ಸಂಪರ್ಕವನ್ನು ಕಡಿತಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. ಒಂದನೇ ಮಹಡಿಯಲ್ಲಿ ನಾವು ವಾಸವಾಗಿದ್ದು ಎರಡನೇ ಮಹಡಿಯ ಮನೆಯು ಖಾಲಿ ಆಗಿರುತ್ತಾರೆ ಎಂದರೆ ಮಾಲೀಕರ ಸ್ವಾದೀನದಲ್ಲಿ ಇರುತ್ತಾರೆ. ಮನೆಯ ಮಾಲೀಕರು ಎಷ್ಟು ದಿವಸಗಳಿಗೊಮ್ಮೆ ಬೆಂಗಳೂರಿಗೆ ಬರುತ್ತಾರೆ ಎಂದರೆ ಮೂರು ತಿಂಗಳಿಗೊಮ್ಮೆ ಅಥವಾ ಆರು ತಿಂಗಳಿಗೊಮ್ಮೆ ಅಥವಾ ವರ್ಷಕ್ಕೆ ಒಂದು ಸಾರಿ ಬಂದು ಹೋಗುತ್ತಿರುತ್ತಾರೆ. ಮನೆಯ ಮಾಲೀಕರು ಬೆಂಗಳೂರಿಗೆ ಬಂದಾಗ ದಾವಾ ಶೆಡ್ಯೂಲ್ ಸ್ವತ್ತಿನ ಎರಡನೇ ಮಹಡಿಯಲ್ಲಿ ವಾಸವಾಗಿರುವುದಿಲ್ಲ ಅವರು ಕೋರಮಂಗಲದ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಜುಲೈ-2018ರಲ್ಲಿ ವಾದಿಯವರು ನಮಗೆ ಮನೆಯನ್ನು ಖಾಲಿ ಮಾಡಿಕೊಡಿ ಎಂದು ಕೇಳಿಕೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಈ ಕೇಸನ್ನು ಹಾಕಿದ ನಂತರ ನಮ್ಮ ಮನೆಯ ಹತ್ತಿರ ಬಂದು ಖಾಲಿ ಮಾಡಿ ಕೊಡಿ ಎಂದು ಕೇಳಿದ್ದು ಆದರೆ ನಮಗೆ ಇನ್ನೂ ಎರಡು ವರ್ಷ ಆಗುವುದಿಲ್ಲ ಎಂದು ಹೇಳಿ ಕಳುಹಿಸಿರುತ್ತೇವೆ.

2. ವಾದಿಯ ವಿರುದ್ದ ನಾವು ಒಂದು ಸಿವಿಲ್ ದಾವೆಯನ್ನು ಸಲ್ಲಿಸಿದ್ದೆವು ಎಂದರೆ ಸರಿ. ಸಾಕ್ಷಿ ಸ್ವತಃ ವಾದಿಯ ಕಡೆಯವರು ರಾತ್ರಿ 9.30 ಗಂಟೆಗೆ ಬಂದು ಜನರನ್ನು ಕರೆದುಕೊಂಡು ಬಂದು ಮನೆಯಿಂದ ಹೊರಹಾಕುತ್ತೇವೆ ಎಂದು ಹೇಳಿದ್ದರಿಂದ ನಾವು ದಾವೆಯನ್ನು ಸಲ್ಲಿಸಿರುತ್ತೇವೆ ಎಂದು ನುಡಿದಿರುತ್ತಾರೆ. ನಾವು ದಾವೆಯನ್ನು ಸಲ್ಲಿಸಿದ ನಂತರ ವಾದಿಯು ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ.

ದಿ:02.08.2018ರಂದು ವಾದಿಯು ವಕೀಲರ ಮೂಲಕ ನಮಗೆ ಬಾಕಿ ಬಾಡಿಗೆ ಹಣ ಪಾವತಿ ಮಾಡುವಂತೆ ಮತ್ತು ಮನೆ ಖಾಲಿ ಮಾಡಿಕೊಡುವಂತೆ ಕೇಳಿ ನೋಟೀಸನ್ನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ನಮಗೆ ನೋಟೀಸು ಜಾರಿಯಾಗಿದ್ದರೂ ಸಹ ನಾವು ಮನೆಯನ್ನು ಖಾಲಿ ಮಾಡಿರುವುದಿಲ್ಲ ಎಂದರೆ ನಮಗೆ ನೋಟೀಸು ಜಾರಿಯಾಗಿರುವುದಿಲ್ಲ. ನಾವು ದಾವಾಶೆಡ್ಯೂಲ್ ಮನೆಯನ್ನು ಖಾಲಿ ಮಾಡುವುದರಿಂದ ನಮಗೆ ಯಾವುದೇ ತೊಂದರೆಗಳು ಇರುವುದಿಲ್ಲ ಎಂದರೆ ಸರಿಯಲ್ಲ.

3. ಈಗ ನನ್ನ ಹೆಂಡತಿ ನಮ್ಮ ಮನೆಯಲ್ಲಿ ಇದ್ದಾರೆ. ನನ್ನ ಹೆಂಡತಿಯು ನನ್ನ ಸಾಕ್ಷ್ಯದ ಪ್ರಮಾಣಪತ್ರದಲ್ಲಿ ತಿಳಿಸಿರುವಂತೆ ಯಾವುದೇ ಮಾಹಿತಿಯನ್ನು ನನಗೆ ಹೇಳಿರುವುದಿಲ್ಲ ಅದನ್ನು ನಾನೇ ಸೃಷ್ಟಿಮಾಡಿಕೊಂಡು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯದ ಪ್ರಮಾಣಪತ್ರದಲ್ಲಿ ಹೇಳಿರುವಂತೆ ಎಲ್ಲಾ ಅಂಶಗಳನ್ನು ನನ್ನ ಹೆಂಡತಿಯು ಅವರು ಹಾಜರುಪಡಿಸಿದ ಸಾಕ್ಷ್ಯದ ಪ್ರಮಾಣಪತ್ರದಲ್ಲಿ ಹೇಳಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರು ನಮಗೆ ಮನೆಯನ್ನು ಖಾಲಿ ಮಾಡಿಕೊಡುವಂತೆ ಕೇಳಿಕೊಂಡಾಗ ನಾವು ಅವರ ವಿರುದ್ಧ ಪೋಲೀಸ್ ಠಾಣೆಯಲ್ಲಿ ದೂರನ್ನು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಅವರು ಗಲಾಟೆ ಮಾಡಿದ್ದರಿಂದ ದೂರನ್ನು ಕೊಟ್ಟಿರುತ್ತೇವೆ ಎಂದು ನುಡಿದಿರುತ್ತಾರೆ. ನಾವು ಹಾಜರುಪಡಿಸಿರುವಂತಹ ನಿಡಿ:1 ರಿಂದ 10ರ ತನಕ ಇರುವ ದಾಖಲೆಗಳು ವಾದಿಯರು ಮನೆಯನ್ನು ಖಾಲಿ ಮಾಡಿಸುತ್ತಾರೆ ಎಂದು ಅವರನ್ನು ಭಯಪಡಿಸಲು ಕೊಟ್ಟಂತಹ ದೂರುಗಳು ಆಗಿರುತ್ತದೆ ಎಂದರೆ ಸರಿಯಲ್ಲ. ನಾವು ಮನೆಯನ್ನು ಖಾಲಿ ಮಾಡಬೇಕಾಗುತ್ತದೆ ಎಂದು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೇ ಸ ಇದೆ

15ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ